ಚಿಗರೆಗಾಗಿ ಅಳಲು ಪ್ರಾರಂಭಿಸಿದ. ರಕ್ಷಕರು ಚಿಗರೆಯ ಹುಡುಗನನ್ನು ಹಿಡಿದು ರಾಜಮಂದಿರದ ಕಡೆಗೆ ಹೊರಟರು.

ರಾಜಕುವರ ಅಳುತ್ತಾ ಬರುತ್ತಿರುವುದನ್ನು ವಾತಾಯನದ ಮೂಲಕ ರಾಣಿ ನೋಡಿದಳು. ಇದ್ದಕ್ಕಿದ್ದ ಹಾಗೆ ಬಿರುಗಾಳಿ ಬೀಸಿದಂತಾಯಿತು. ವಿಷಯವನ್ನು ತಿಳಿದ ರಾಣಿ ಆ ಹಕ್ಕಿ ಬೇಟೆಗಾರ ಹುಡುಗನಿಗೆ ಬೆತ್ತದಿಂದ ಥಳಿಸುವ ಆಜ್ಞೆ ಮಾಡಿದಳು.

ತೋಟಗಾತಿಯ ಮಗ ಅಳದೇ ಕಣ್ಣೀರು ಹರಿಸದಯೇ ಬೆತ್ತದ ಏಟುಗಳನ್ನು ಸಹಿಸಿಕೊಂಡನು. ಆತನ ಶರೀರವೆಲ್ಲಾ ಹೊಡೆತದಿಂದ ರಕ್ತಮಯವಾಗಿ ಹೋಗಿತ್ತು. ನೋವಿನಿಂದ ಆತನಿಗೆ ನಡೆಯಲೂ ಸಹ ಆಗುತ್ತಿರಲಿಲ್ಲ. ಬೇಟೆಯಿಂದ ಹಿಂತಿರುಗಿ ಬಂದ ರಾಜ ಈ ದೃಶ್ಯವನ್ನು ನೋಡಿದ. ಒಮ್ಮೆ ಕರುಣೆ ಉಕ್ಕಿ ಬಂತು. ಆದರೆ ಆತನಿಂದ ಏನೂ ಪ್ರಯೋಜನವಾಗಲಿಲ್ಲ. ಏಕೆಂದರೆ ಅದು ರಾಣಿಯ ಆಜ್ಞೆಯಾಗಿತ್ತು. ತೋಟಗಾತಿ ರಾಜ ಹೊರಟು ಹೋದ ಮೇಲೆ ತನ್ನ ಮಗನನ್ನು ತೊಡೆಯ ಮೇಲೆ ಮಲಗಿಸಿಕೊಂಡಳು. ತನ್ನ ಕಣ್ಣೀರಿನಿಂದ ಮಗನ ಶರೀರದ ಗಾಯಗಳನ್ನು ತೊಳೆಯುತ್ತ ಹೇಳಿದಳು, ಅಯ್ಯೋ, ಈ ಜನರು ಎಷ್ಟು ನಿರ್ದಯಿಗಳು..

ಪುನಃ ಕೆಲವು ವರ್ಷಗಳು ಗತಿಸಿದವು. ಹೊಸ ರಾಜಕುವರನಿಗೆ ಮೃಗಯಾ ಶಿಕ್ಷಣ, ಬಿಲ್ಲುವಿದ್ಯೆಗಳಿಗಾಗಿ ಅದೇ ನಗರದ ಹೊರವಲಯದ ಕಾಡನ್ನು ಮೀಸಲಿಡಲಾಯಿತು. ಅಲ್ಲಿ ಆತ ಹರಿಣಗಳಿಗೆ, ಪಕ್ಷಿಗಳಿಗೆ ಗುರಿ ಇಟ್ಟು ಬಾಣ ಹೂಡುತ್ತ ಬಿಲ್ಲುವಿದ್ಯೆ ಕಲಿಯತೊಡಗಿದ. ಇದರಿಂದ ತೋಟಗಾತಿಗೂ ಸ್ವಲ್ಪ ಲಾಭವಾಗತೊಡಗಿತು. ಜಿಂಕೆಗಳನ್ನು ಓಡಿಸುವುದರಿಂದ ಪಕ್ಷಿಗಳ ಗುರುತು ತಿಳಿಸುವುದರಿಂದ ಏನಾದರೂ ಸ್ವಲ್ಪ ಆಕೆಗೆ ದೊರೆಯುತ್ತಿತ್ತು. ಆದರೆ ಆಕೆಯ ಮಗ ಮಾತ್ರ ರಾಜಕುವರ ಬೇಟೆಯಲ್ಲಿ ಭಾಗವಹಿಸುವಂತಿರಲಿಲ್ಲ.

ಹದಿನಾರು ವರ್ಷಗಳ ಬಳಿಕ ವಸಂತದ ಒಂದು ಬೇಸಿಗೆಯ ದಿನ ರಾಜ ತನ್ನ ಪುತ್ರನ ಬೇಟೆಯ ಪರಿಣತಿಯ ಪರೀಕ್ಷೆ ಮಾಡಲು ಕಾಡಿಗೆ ಬಂದ. ಆ ಪರಿಸರದ ಎಲ್ಲ ಗಿಡ, ಮರ ಹಾಗೂ ಸುಂದರ ಲತೆಬಳ್ಳಿಗಳು ಬಾಡಿ ಹೋಗಿರುವುದನ್ನು ಕಂಡು ರಾಜನ ಮುಖ ಕಳೆಗುಂದಿತು. ಮರಗಿಡಗಳ ಗಿಣ್ಣುಗಳಲ್ಲಿ ಎಲ್ಲೋ ಒಂದೆರಡು ಚಿಗುರು, ಹೂಗಳು ಹೊರಬಂದು ತಮ್ಮ ಅಸ್ಥಿತ್ವವನ್ನು ಪ್ರದರ್ಶಿಸಿ ಮುರುಟಿ ಹೋಗಿದ್ದವು. ರಾಜ ತಾನು ಎಂದೋ ಕಂಡ ಕನಸಿನ ಹಾಗೆ ಗತಕಾಲದ ಕಲ್ಪನೆಯಲ್ಲಿ ಮುಳುಗಿಹೋದ.

ಬೇಟೆಗಾರರ ವೇಷದಲ್ಲಿ ರಾಜಕುವರ ಹಾಗೂ ಆತನ ಸಮವಯಸ್ಕರಾದ ಕೆಲವರು ಅಲ್ಲಿಗೆ ಬಂದರು. ತೋಟಗಾತಿಯ ಮಗನೂ ಬಿಲ್ಲುಬಾಣ ಹಿಡಿದು ನಿಂತಿದ್ದನು. ಚಿಗರೆಯ ಮೇಲೆ ಬಾಣ ಪ್ರಯೋಗಿಸಲು ಅಪ್ಪಣೆಯಾಯಿತು. ಕೂಡಲೇ ಈ ಯುವಕ ಬಿಟ್ಟ ಬಾಣ ಚಿಗರೆಯ ಕುತ್ತಿಗೆಯನ್ನು ಸೀಳಿ ರಾಜಕುವರನ ಎದೆಗೆ ನೆಟ್ಟಿತು. ರಾಜಕುವರ ಪ್ರಜ್ಞಾಹೀನನಾಗಿ ನೆಲಕ್ಕುರುಳಿದ. ಈ ಯುವಕನನ್ನು ಬಂಧಿಸಲಾಯಿತು.

ಇತ್ತ ಆ ತೋಟಗಾತಿ ರಾಜರು ಬಂದಿರುವ ಸಮಾಚಾರ ತಿಳಿದು ಅವರಿಗಾಗಿ ಹೂಗಳನ್ನು ಅರಸುವ ಕೆಲಸದಲ್ಲಿ ತಲ್ಲೀನಳಾಗಿದ್ದಳು. ಆದರೆ ಆ ಪರಿಸರದಲ್ಲಿ ಕಾಮಿನಿ ಹೂಗಳು ಇರಲಿಲ್ಲ. ಹಾಗಾಗಿ ಅವಳು ಹಿಪ್ಪೇ ಹೂಗಳು ಮತ್ತು ಗರಿಕೆಯನ್ನು ಸೇರಿಸಿ ಒಂದು ಸುಂದರ ಮಾಲೆಯನ್ನು ಮಾಡಿದ್ದಳು.

ರಾಜ ಕ್ರೋಧದಿಂದ ಕುದಿಯುತ್ತಿದ್ದ. ರಾಜ ಪ್ರತೀಕಾರದ ಸ್ವರದಿಂದ ಅಬ್ಬರಿಸಿದ. ತಕ್ಷಣ ಬೇಟೆಗಾರನ ಬಿಲ್ಲಿನಿಂದ ಬಾಣಗಳು ಸುರಿದವು. ಆ ಮುಗ್ಧ ಬಾಲಕನ ಸುಂದರ ಶರೀರ ಕ್ಷಣಾರ್ಧದಲ್ಲಿ ಭೂಮಿಗೊರಗಿತು. ಅದೇ ಸಮಯಕ್ಕೆ ಹಿಪ್ಪೇ ಹೂವಿನ ಮಾಲೆಯೊಂದಿಗೆ ತೋಟಗಾತಿ ಬಂದು ರಾಜನ ಸಮ್ಮುಖ ನಿಂತಳು.

ಆ ಹೊತ್ತಿಗಾಗಲೇ ಕ್ರೂರ ವಿಧಿ ತನ್ನ ಕೆಲಸವನ್ನು ಮುಗಿಸಿತ್ತು. ಕೂಡಲೇ ತೋಟಗಾತಿ ತನ್ನ ಮಗನ ಶವದ ಬಳಿ ಬಂದಳು. ಹುಚ್ಚಿಯಂತಾದ ಅವಳು ತನ್ನ ಕೈಯಲ್ಲಿದ್ದ ಹೂವಿನ ಮಾಲೆಯನ್ನು ರಾಜನ ಮೇಲೆ ಎಸೆದು ಮಗನ ಶವವನ್ನು ತೊಡೆಯ ಮೇಲಿರಿಸಿಕೊಂಡಳು. ಆತನ ಚೇತನಾರಹಿತ ಕಣ್ಣುಗಳು ಮೌನ ಭಾಷೆಯಲ್ಲಿ, ಅಮ್ಮಾ..... ಅಮ್ಮಾ..... ಎಂದು ಕರೆಯುತ್ತಿರುವಂತೆ ಭಾಸವಾಗುತ್ತಿತ್ತು. ಆಕೆ ಹೃದಯವನ್ನೇ ಸೀಳುವಂತಹ ದೃಷ್ಟಿಯಿಂದ ರಾಜನನ್ನೊಮ್ಮೆ ನೋಡಿದಳು. ಮತ್ತೆ ಅತ್ತ ಬಿದ್ದಿದ್ದ ರಾಜಕುವರನ ಶವವನ್ನೂ ಸಹ.

ರಾಜನಿಗೆ ಒಮ್ಮೆ ಭೂಮಿ ಆಕಾಶದ ಮಧ್ಯೆ ತ್ರಿಶಂಕು ಸ್ಥಿತಿಯಲ್ಲಿ ಸಿಲುಕಿದ ಅನುಭವವಾಯಿತು. ಈಗ ರಾಜಕುವರನ ಸಾವಿನ ದುಃಖ ಹಾಗೂ ಕ್ರೋಧವೆಲ್ಲ ಮಳೆಗಾಲದ ನೀರು ಕಾಲುವೆಯಲ್ಲಿ ರಭಸವಾಗಿ ಹರಿವ ನೀರಿನಲ್ಲಿ ಕೊಚ್ಚಿಹೋಗುವ ಗುಳ್ಳೆಯಂತಾಗಿ ಕರಗಿಹೋಯಿತು. ಅವನ ಹೃದಯದಲ್ಲಿ ಶೂನ್ಯ ಆವರಿಸಿತು. ಒಮ್ಮೆ ಎಚ್ಚರಗೊಂಡವನಂತೆ ಆತ ಆಕೆಯನ್ನು ನೋಡಿದ. ಮತ್ತೆ ಅದೇ ಜೀರ್ಣವಾದ ರೇಷ್ಮೆ ವಸ್ತ್ರ... ತೋಟಗಾತಿ... ರಾಜ... ಕಾಮಿನಿಯ ಕಣ್ಣಲ್ಲಿ ನೀರು ಇರಲಿಲ್ಲ.

ಇವನು ಯಾರು?

ತೋಟಗಾತಿ ತಲೆತಗ್ಗಿಸಿ ಗಂಭೀರವಾದ ಸ್ವರದಲ್ಲಿ ನುಡಿದಳು, ಅಪರಾಧಿ.

# ಹೊಗೆ

■ ಎಚ್.ಕೆ.ಶರತ್

ಕೆಂಡಸಂಪಿಗೆಯ ಪರಿಮಳ ಆಸ್ವಾದಿಸಲು ಥಿಯೇಟರ್‌ಗೆ ಬಂದ ಮೂವರು ಯುವಕರ ತಲೆಯಲ್ಲಿ ಟಿಕೆಟ್ ಕೌಂಟರ್‌ಗೆ ಹೋಗುವ ಮುನ್ನ ಬಾಲ್ಕನಿಯೋ ಫಸ್ಟ್ ಕ್ಲಾಸೋ ಎಂಬ ಗೊಂದಲ ಏರ್ಪಟ್ಟಿತು.

ಒಬ್ಬ ತನ್ನ ನಿಲುವು ಹೊರ ಹಾಕಿದ. 'ನೋಡ್ರುಲಾ... ಬಾಲ್ಕನಿಲಿ ಕೂತ್ರೂ ಅದೇ ಸಿನ್ಮಾ ಕಾಣೋದು, ಫಸ್ಟ್ ಕ್ಲಾಸಲ್ ಕೂತ್ರು ಅದೇಯ ಕಾಣದು.



ಅದ್ಯಾಕೆ ಇಪ್ಪತ್ರೂಪಾಯ್ ಎಕ್ಸ್ಟ್ರಾ ಕೊಟ್ಟು ಬಾಲ್ಕನಿಗೋಗದು?! ಮುಚ್ಕಂದು ಐವತ್ ರೂಪಾಯ್ ಕೊಟ್ಟು ಫಸ್ಟ್ ಕ್ಲಾಸ್ ಟಿಕೆಟ್ ತಗಳಣ. ಉಳ್ಯೋ ಇಪ್ಪತ್ತಿಪ್ಪತ್ ರೂಪಾಯಲ್ ಎರ್ಡೆರ್ಡು ಸಿಗ್ರೇಟ್ ಸುಡ್ಬಹ್ದು.'

ಅವನ ಮಾತಿಗೆ ಉಳಿದ ಇಬ್ಬರು ತಲೆಯಾಡಿಸಿದರು. ಇವರ ಮಾತು ಆಲಿಸಿದ ಹಿರಿಯ ಜೀವವೊಂದು, ಫಸ್ಟ್ ಕ್ಲಾಸಲ್ ಕೂತ್ರೆ ಇಪ್ಪತ್ ರೂಪಾಯ್ನೇನೊ ಉಳುಸ್ತೀರ ಕಣ್ರಪ್ಪ. ಆದ್ರೆ ನಿಮ್ ಆರೋಗ್ಯನೇ ಲಾಸ್ ಮಾಡ್ಕೊಳ್ತೀರಲ್ರಪ್ಪ. ಇಪ್ಪತ್ರೂಪಾಯ್ ಉಳ್ಸಿ ಹೊಗೆ ಹಾಕುಸ್ಕಳೋದು ಒಳ್ಳೇದೋ ಅಥ್ವಾ ಬಾಲ್ಕನಿಲಿ ಸಿನ್ಮಾ ನೋಡ್ಕಂಡು ಹೋಗೋಗ್ ಒಳ್ಳೇದಾ ನೀವೇ ಯೋಚ್ನೆ ಮಾಡ್ರಪ್ಪ' ಅಂತೇಳಿ ಸಿನಿಮಾ ನೋಡಲು ಬಾಲ್ಕನಿಗೆ ಕರೆದೊಯ್ಯುವ ಮೆಟ್ಟಿಲುಗಳ ಹಾದಿ ಹಿಡಿದರು.

ಇಂಟರ್‌ವಲ್‌ನಲ್ಲಿ ಪುರುಷರ ಶೌಚಾಲಯಕ್ಕೆ ದಾರಿ ಅರಸಿ ಹೋದ ಅವರ ಕಣ್ಣಿಗೆ ಬಾಲ್ಕನಿಯಲ್ಲಿ ಹೊಗೆ ಹಾಕುವ ಮೂಲಕ ಹೊಗೆ ಹಾಕಿಸಿಕೊಳ್ಳುತ್ತಿದ್ದವರು ಕಂಡರು. "ಇಲ್ಲಿ ಧೂಮಪಾನ ನಿಷೇಧಿಸಿದೆ' ಎಂಬ ಬೋರ್ಡ್ ತನಗೇ ಏನೋ ಹೇಳುತ್ತಿರಬಹುದೇನೊ ಎಂಬಂತೆ ದಿಟ್ಟಿಸಿ ನೋಡಲಾರಂಭಿಸಿದರು. ಉಳಿದವರು ಕೈ ಸುಡುವಷ್ಟು ಮೋಟಾದ ಸಿಗರೇಟನ್ನು ನೆಲಕ್ಕೆಸೆದು ತುಳಿದರು. ಮತ್ತೆ ಕೆಂಡಸಂಪಿಗೆಯನ್ನರಸಿ ಬಾಲ್ಕನಿಯ ಒಡಲಿಗೆ ತೂರಿಕೊಂಡರು.